ಸಮಾಧಿ – ಸಮ ಆದಿ –ಸಮಾನ

ಅಜ್ಜ–
'ನಾನೂ' 'ನೀನೂ' ಸಮಾನ
ಅಂದೊಮ್ಮೆ ನೀ ಅಂದಾಗ
ನನಗನ್ನಿಸಿದ್ದು
ಅದು ಹೇಗೆ ಸಾಧ್ಯ?
ಬಿಂದು ಸಿಂಧುವಿಗೆ ಸಮವೆ?
ಸಮುದ್ರ .... ಏಕಾಂಗಿ ಸನ್ಯಾಸಿ
ನದಿಗೋ ಜನುಮ ಜನುಮಗಳಲ್ಲಿ ಹರಿವ ತವಕ
ಹರಿದಾಗ ಹುಟ್ಟಿದ ದಂಡೆ–ಬಂಡೆ–ತೆರೆ..
ಅಂತರಂಗದಲ್ಲಿ ಎಷ್ಟೊಂದು ಬಣ್ಣದ ಮೀನು
ಆಸೆಗಳಿಗೆ ಲೆಕ್ಕವುಂಟೆ?
ಸಿಹಿ ಮೀನುಗಳ ನದಿ ಉಪ್ಪು ಸಮುದ್ರ ಸೇರಲುಂಟೆ?

ಸುಲಭ ಅಂದಿರಿ ಒಮ್ಮೆ
ಕರುಣೆಯ ಮೇಲೆ ಗೀಟು ಎಳೆದಿರಿ
(ಪುಣ್ಯ–ದೇವರ ಮೇಲೆ ಗೀಟು ಎಳೆದುದನ್ನು ಎಲ್ಲರಿಗೂ ಹೇಳಲಿಲ್ಲ)
"ದೇವರು ಸತ್ಯ "ವಾದರೆ
ಸುಲಭ...ಶರಣಾಗತರಾಗಬಹುದು
'ಗತ' ವಾಗುವುದಂತೂ ಗ್ಯಾರಂಟಿ
ಅಮರ ಬುದ್ಧನೇ 'ತಥಾಗತ'
ಆದರೇ
"ಸತ್ಯವೇ ದೇವ'ರಾದರೆ
ಎಲ್ಲವಿಪರೀತ..
ಶೋಧಿಸಬೇಕು , ಶೋಧನೆಗಾಗಿ ಸಾಧಿಸಬೇಕು
ಅದಕ್ಕಾಗಿ ಕಾಯಬೇಕು. ಕಾಯಕ್ಕಾಗಿ ಹುಟ್ಟಬೇಕು
ಬದುಕಬೇಕು . ಬಂದುದನ್ನು ಅನುಭವಿಸಬೇಕು
ಅನುಭವ ಸತ್ಯವೇ?– ಅನುಭಾವ ಬೇಕು.
ಅಲ್ಲ; ಸತ್ಯ ಯಾವಾಗಲೂ ಮುಂದಿನ ತಾಣವೇ?
ಮುಂದಿನ ಜನ್ಮದ ನಿಲ್ದಾಣವೇ?
ದುರ್ಲಭೋ ದುರ್ಗಮೋ ದುರ್ಗೋ ದುರಾವಾಸೋ ದುರಾರಿಹ
ಆದರೂ
ಒಳಗೆ...
ನಾನು ಒಳಗೇ ಅಂದ ನಿಮ್ಮನ್ನು
ಒಳಗೆ ನಿಜವಾಗಿ ಕಂಡರೇ, ಇಲ್ಲ
ಹೊರಗೆ ಸೂರ್ಯನೊಂದಿಗೆ ನೋಡಿದರೆ,

ಕಂಡವರು ಆಗಬಹುದು ಸಮಾನ
ಏರಬಹುದು ಶೂನ್ಯ ಸಿಂಹಾಸನ.

ನಿಮಗೆ ಯಾವಾಗಲೂ ಸತ್ಯದ ನೆಚ್ಚು
ಸತ್ಯವಾಗಿ ಬಿಟ್ಟಿರಿ!
ನಮಗೋ ಪ್ರೀತಿಯ ಹುಚ್ಚು
ಎಲ್ಲಿದೆಲ್ಲಿಯ ಬಂಧ ನಮ್ಮ ಅನುಬಂಧ
'ಸಮುದ್ರದ ಉಪ್ಪಿಗೂ ಬೆಟ್ಟದ ನೆಲ್ಲಿಕಾಯಿಗೂ'
ನೋಡಿ ಇಲ್ಲಿ ಎಷ್ಟು ನೆಲ್ಲಿಕಾಯಿಗಳು?
ನಾವು ಪ್ರೀತಿಸಲೇ ಇಲ್ಲ
ಪ್ರೀತಿಸಿ ಒಂದಾಗಲಿಲ್ಲ
ಪ್ರೀತಿಸಿದ್ದರೆ ಒಂದಾಗಿ ಸಮಾನವಾಗಬೇಕಿತ್ತಲ್ಲ
'ಒಂದು' ಒತ್ತಿದಾಗ ಗಂಟೆ ಮೊಳಗಬೇಕಿತ್ತಲ್ಲ
ಅಲ್ಲಿನ ದನಿ ಇಲ್ಲಿ ಮೂಡಬೇಕಿತ್ತಲ್ಲ
ಪೂರ್ಣಮದಃ ಪೂರ್ಣಮಿದಮ್ ಪೂರ್ಣಾತ್ ಪೂರ್ಣ ಮುದಚ್ಯತೇ...
ಕಣ್ಣೀರು ಒರಸಲು ಬಂದ ನೀವು
ಯಾರದೋ ನೋವಿಗೆ ಕಣೀರು ಹರಿಸಿದಿರಿ
ಕೊನೆಗೆ ನನ್ನ ಕಣ್ಣಲ್ಲೂ ನೀರು ತರಿಸಿದಿರಿ
ಬಿಟ್ಟು ಹೋದ ಸತ್ಯ .., ಶಾಂತಿ
ಕೇವಲ ಸಂಕೇತಗಳೊ..ಸಂದೇಶಗಳೋ
ನಿಮ್ಮದೇ ಸಾಲು
"ಮುಂದೆ ನೋಡುವಾ"...

ಹುಟ್ಟ ಕುರುಡ ಧೃತರಾಷ್ಟ್ರನಿಗೀಗ ಕೃಷ್ಣ ಸಮಾನವಾಗುವ ಕನಸು
ಕಂಡೀತೇ ಬೆಳಕು ಕಣ್ಣಿಲ್ಲದವನಿಗೆ?
(ಕಾಣದಾದೀತೇ ಮುಖ ಕನ್ನದಿಯೊಳಗೆ–ಕಣ್ಣಿದ್ದವನಿಗೆ)
ಇಬ್ಬರೂ ಸಮವೇ... ಎಷ್ಟೊಂದು ಮಕ್ಕಳು ಇಬ್ಬರಿಗೂ
ಆದರೂ ಕೃಷ್ಣ ಸನ್ಯಾಸಿ, ಬ್ರಹ್ಮಚಾರಿ!
ರಾಧೆಯನ್ನೇ ಬಿಟ್ಟ– ಸೀತೆಯದು ಯಾವ ಲೆಕ್ಕ?
ಮುಟ್ಟಿದ ಮೃತಮಗು ಹುಟ್ಟಿ ಅತ್ತಿತು
ಅಲ್ಲಿತ್ತು ನಿಜ ಪ್ರೀತಿ
ಪ್ರೀತಿ ಮುಟ್ಟಿದರೆ ಸಾವು ನಿಂತೀತೇ?
ಸೋತಿತ್ತು ಸಾವು ಅಂದು ಆಗ–
ಈಗ ನಾವೂ ಸೋತೆವು.
ಅಂದರೆ ನಮ್ಮ ಪ್ರೀತಿ ಸತ್ಯ ಅಲ್ಲವೇ?
ಮತ್ತೆ ಪುನಃ ಹುಡುಕಾಟ; ಇಳಿ ವಯಸ್ಸಿನಲ್ಲೂ ಹುಡುಕಾಟ!

ಅಜ್ಜ... "ದಿವ್ಯಂ ದದಾಮಿತೇ ಚಕ್ಷು:' ಯಾವಾಗ?

ಅದು ಹೇಗೆ ಅಂತ್ಯ ಆದಿ ಇಲ್ಲದಕ್ಕೆ ಈಗ ಸಮಾಧಿ?
ಇದ್ದ ಒಂದು ಒಳಗೆ
ಸಮ ಆಗದವೆರೆಲ್ಲಾ ಹೊರಗೆ
ಗಾಂಧಿ ಗ್ರಾಮದಲ್ಲೂ ರಾಮರಾಜ್ಯದಲ್ಲೂ ಇದೆಂಥಾ ಅಸಮಾನತೆ
ಯಾವಾಗ ಹೇಳುವುದು
'ಲೋಕಾ ಸಮಸ್ತಾ ಸುಖಿನೋ ಸಮವಂತು'
ಅಲ್ಲಿಯವರೆಗೆ ಕೇವಲ ಪ್ರಾರ್ಥನೆ
ರಘುಪತಿ ರಾಘವ ರಾಜಾರಾಮ್
ಸಬಕೋ ಸನ್ಮತಿ ದೇ ಭಗವಾನ್
ಎ.ಕೆ.ಅಪ್ಸಂಗಿ